ಅ) ಬೆಣ್ಣೆತೋರಾ ಸೇತುವೆ ಕಾರ್ಯ ಎಂದು ಪ್ರಾರಂಭವಾಯಿತು?

ಆ) ಇದಕ್ಕೆ ತಗಲುವ ವೆಚ್ಚವೆಷ್ಟು? ಮತ್ತು ಈ ಕಾಮಗಾರಿ ಎಂದು ಪೂರ್ಣಗೊಳ್ಳುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ) :

ಪ್ರಾರಂಭವಾಗಿರುವುದಿಲ್ಲ ಇನ್ನೂ ಪರಿಶೀಲನಾ ಹಂತದಲ್ಲಿದೆ.

ಸಣ್ಣ ನೀರಾವರಿಯ ಬಗ್ಗೆ

246-ಶ್ರೀ ರೇವುನಾಯಕ್ ಬೆಳಮಾಗಿ (ಕಮಲಾಪುರ) :ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಳಂದ ತಾಲ್ಲೂಕಿನಲ್ಲಿ ಎಷ್ಟು ಕಡೆ ಪರ್ಕುಲೇಷನ್ ಟ್ಯಾಂಕಿಗಾಗಿ ಜನರಿಂದ ಬೇಡಿಕೆ ಬಂದಿದೆ ಹಾಗೂ ಅವುಗಳಲ್ಲಿ ಎಷ್ಟನ್ನು ಪ್ರಸ್ತುತ ವರ್ಷ ತೆಗೆದುಕೊಳ್ಳಲಾಗಿದೆ ಮತ್ತು ಕಾರ್ಯ ಪ್ರಗತಿ ಯಾವ ಹಂತದಲ್ಲಿದೆ?

ಆ) ಅಣ್ಣೂರ, ಕೋತನಹಿಪ್ಪರಗಿ, ನಿರ್ಗುಡಿ, ಕಳಹರಿ, ಬೆಳಂಬಿಗಿ ಮಧುರೈ, ಈ ಗ್ರಾಮಗಳಿಂದಲು ಪರ್ಕುಲೇಷನ್ ಟ್ಯಾಂಕ್ ಸಲುವಾಗಿ ಗ್ರಾಮೀಣ ಜನರಿಂದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಪ್ರಸ್ತುತ ವರ್ಷ 1994-95ರಲ್ಲಿ ಆಳಂದ ತಾಲ್ಲೂಕಿನಲ್ಲಿ ಎರಡು ಕಡೆ ಪರ್ಕುಲೇಷನ್ ಟ್ಯಾಂಕ್ ನಿರ್ಮಿಸಲು ಜನರಿಂದ ಬೇಡಿಕೆ ಬಂದಿದೆ.

ಮದಗುಣಕಿ ಮತ್ತು ಜಳಕಿ(ಬಿ) ಗ್ರಾಮಗಳಲ್ಲಿ ಇವುಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು ಈ ಯೋಜನೆಗಳು ಶಕ್ಯವಾದಲ್ಲಿ 1995-96ರಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಆ) ಬಂದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳ ಬಗ್ಗೆ

262 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು? ಹಾಗೂ ಸಿಬ್ಬಂದಿ ಸಂಖ್ಯೆ ಎಷ್ಟು?

ಆ) ಅನೇಕ ಠಾಣೆಗಳಲ್ಲಿ ಈಗಿರುವ ಸಂಖ್ಯೆ ಕಡಿಮೆ ಇದ್ದು, ಅವನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) 48 ಪೋಲೀಸ್ ಠಾಣೆಗಳಿವೆ.

ಈ 48 ಪೊಲೀಸ್ ಠಾಣೆಗಳಿಗೆ ಮಂಜೂರಾದ ಸಿಬ್ಬಂದಿ ಬಲ ಈ ಕೆಳಕಂಡಂತಿದೆ.

ಪೊಲೀಸ್ ಇನ್ಸ್‌ಪೆಕ್ಟರ್	-	10
ಪೊಲೀಸ್ ಸಬ್ ಇನ್ಸ್‌ಪೆಕ್ಟರ್	-	62
ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್	-	105
ಹೆಡ್ ಕಾನ್ಸ್‌ಟೇಬಲ್	-	383
ಪೊಲೀಸ್ ಕಾನ್ಸ್‌ಟೇಬಲ್	-	1266